ನೋಟೀಸ್‌ನಲ್ಲಿರುವ ನ್ಯೂನ್ಯತೆಗಳ ಬಗ್ಗೆ ಸ್ಪಷ್ಟವಾಗಿ ವಿವರಿಸಿರುವುದಿಲ್ಲ ಹಾಗೂ ಬಹುಶಃ ರೋಗವು ಹರಡುವ ಸಂಭವವಿರುತ್ತದೆಂದು ತಿಳಿಸಿ ಏಕಾ ಏಕಿ ಬಾಗಿಲನ್ನು ಮುಚ್ಚುವುದರಿಂದ ಅಲ್ಲಿ ಕೆಲಸ ಮಾಡುವ ನೌಕರರ ಜೀವನೋಪಾಯಕ್ಕೂ ತೊಂದರೆಯಾಗಿರುವುದಲ್ಲದೆ ಅರ್ಜಿದಾರರಿಗೆ ಉದ್ಯಮದಲ್ಲಿ ನಷ್ಟವುಂಟಾಗಲು ಕಾರಣವಾಗಿರುತ್ತದೆ. ಹಾಗೂ ಕೆ.ಎಂ.ಸಿ.ಕಾಯ್ದೆ 1976ರ ಯಾವ ಕಲಂ ಅಡಿಯಲ್ಲಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆಂಬ ಬಗ್ಗೆ ಸ್ಪಷ್ಟ ಕಾರಣಗಳನ್ನು ತಿಳಿಸಿರುವುದು ಕಂಡು ಬರುತ್ತಿಲ್ಲ. ಇದೆಲ್ಲವನ್ನೂ ಗಮನಿಸಲಾಗಿ ಕ್ಯಾಂಟೀನ್ ಮುಚ್ಚವಾಗ ಕಾನೂನಿನಲ್ಲಿರುವ ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬರುತ್ತದೆ.

ಅರ್ಜಿದಾರರು ತಮ್ಮ ಮನವಿಯಲ್ಲಿ ತಿಳಿಸಿರುವಂತೆ ನ್ಯೂನ್ಯತೆಗಳ ಬಗ್ಗೆ ನೋಟೀಸ್‌ನ್ನು ನೀಡಿ ನ್ಯೂನ್ಯತೆಗಳನ್ನು ಸರಿಪಡಿಸಲು ಕಾಲವಕಾಶವನ್ನು ನೀಡದೆ ಏಕಾ ಏಕಿ ಬಾಗಿಲು ಮುಚ್ಚಿರುವುದು ಸ್ವಭಾವ ಸಿದ್ಧ ನ್ಯಾಯಕ್ಕನುಗುಣವಾಗಿಲ್ಲದೇ ಇರುವುದು ಸ್ಪಷ್ಟವಾಗಿರುತ್ತದೆ.

**<u>ದಿನಾಂಕ:31-12-2010: ನಿರ್ಣಯ:-</u> ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆ.ಎಂ.ಸಿ. ಕಾಯ್ದೆ 1976ರ ಅನುಸಾರ ಪರವಾನಗಿಯನ್ನು ರದ್ದುಮಾಡಲು ಅರ್ಜಿದಾರರಿಗೆ ನೋಟೀಸ್ ನೀಡಿ ಕಾಲವಕಾಶ ನೀಡದೆ ತಪಾಸಣೆ ಮಾಡಿದ ದಿನವೇ ನೋಟೀಸ್‌ನ್ನು ಹೊರಡಿಸಿ ಬಾಗಿಲನ್ನು ಮುಚ್ಚಿರುವುದು ಕಾನೂನು ಬಾಹಿರವಾಗಿರುವುದು ಕಂಡು ಬರುವುದರಿಂದ ದಿನಾಂಕ:08-12-2010ರಂದು ನೀಡಿರುವ ನೋಟೀಸ್‌ಗೆ ತಡಯಾಜ್ಞೆ ನೀಡುತ್ತಾ ಕ್ಯಾಂಟೀನ್ ಬಾಗಿಲು ಮುಚ್ಚಿರುವುದನ್ನು ಕೂಡಲೇ ತೆರವುಗಳಿಸಲು ಹಾಗೂ ಕ್ಯಾಂಟೀನ್ ಮುಚ್ಚುವ ಮೊದಲು ಕಾಲ ಕಾಲಕ್ಕೆ ತೆಗೆದುಕೊಂಡ ಕ್ರಮಗಳ ಪೂರ್ಣ ವರದಿಯೊಂದಿಗೆ ಸಮಿತಿಯ ತೀರ್ಮಾನಕ್ಕಾಗಿ ಕಡತವನ್ನು ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

### <u>ಅಪೀಲು ಸ್ಥಾಯಿ ಸಮಿತಿಯ ದಿನಾಂಕ:07-01-2011ರಂದು ನಡೆದ ಸಭೆಯ ನಡವಳಿಗಳು</u>

| ಕ್ರಮ | ಸದಸ್ಯರು ಹೆಸರು | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|

| ಸಂಖ್ಯೆ | ಶ್ರೀಯುತರುಗಳಾದ | | |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಜಯನಗರ)/(ಬಿಟಿಎಂ)/ಪದ್ಮನಾಭನಗರ ವಲಯ |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11

ಶ್ರೀ.ಅಬ್ದುಲ್ ಕಾದಿರ್ ಪಿ.ಎಂ. (ಪ್ರತಿನಿಧಿ) ಮೆ:ಹೆಲ್ತ್ ವೇ ಮಡಿಕಲ್ ಡಯಾಗ್ನೋಸ್ಟಿಕ್, ನಂ. 393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರ-34 ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರ ನಿರಾಕರಿಸಿದ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ಟಿಪ್ಪಣಿ.
ಪ್ರಸ್ತಾವನೆ:-ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

"ಅರ್ಜಿದಾರರಿಗೆ 21-01-11ಕ್ಕೆ ವಿಚಾರಣೆಗೆ ಹಾಜರಾಗಲು ಅಂತಿಮ ತಿಳುವಳಿಕೆ
ಪತ್ರ ನೀಡಲು ಆದೇಶಿಸಿ ಮುಂದೂಡಿದೆ"

2.ವಿಷಯ:ಸಂಖ್ಯೆ:ಅಸ್ಥಾಸ/(ಆ)/04/2010-11

ಆಯುಕ್ತರ ದಿನಾಂಕ:21-12-2010ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಯನಗರ ವಿದಾನಸಭಾ ಕ್ಷೇತ್ರ, ವಾರ್ಡ್ ಸಂಖ್ಯೆ:168ರಲ್ಲಿ ಶ್ರೀ.ಶಾಂತಿಲಾಲ್ ರಿಕಬ್ ಚಾಂದ್ ಎಂಬುವವರು ಕಟ್ಟಡ ಸಂಖ್ಯೆ:487/46, 19ನೇ ಮುಖ್ಯರಸ್ತೆ, 39 ಇ ಅಡ್ಡರಸ್ತೆ, 4ನೇ ಟಿ. ಬ್ಲಾಕ್ ಜಯನಗರ ಈ ಸ್ಥಳದಲ್ಲಿ ಪುಷ್ಪರಾಹ್ ಎಂಬ ಹೆಸರಿನ ರಸ್ಟೋರೆಮಟ್ ಉದ್ದಿಮೆಗೆ ಪರವಾನಗಿಗಾಗಿ ಅರ್ಜಿ ಪರವಾನಗಿ ಶುಲ್ಕ, ಖಾತಾ ನಕಲು, ಕಂದಾಯ ಪಾವತಿ ರಶೀತಿ, ಉದ್ದಿಮೆ ಸ್ಥಳದ ನೀಲಿ ನಕ್ಷೆ, ಮಾಲೀಕರ ಒಪ್ಪಿಗೆ ಪತ್ರ ಸಲ್ಲಿಸಿ ಪರವಾನಗಿ ಕೋರಿರುತ್ತಾರೆ. ಆದರೆ ಉದ್ದಿಮೆ ಸ್ಥಳದ ಅಕ್ಕಪಕ್ಕದ ನಿವಾಸಿಗಳು ಈ ಕೆಳಕಂಡ ದಿನಾಂಕದಲ್ಲಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

1. ದಿನಾಂಕ:08-03-2010ರಂದು ಪಾಲಿಕೆಯ ಮಾನ್ಯ ಆಯುಕ್ತರವರ ಆಪ್ತ ಕಾರ್ಯಾಲಯಕ್ಕೆ ಮೇಲ್ಕಂಡ ಸ್ಥಳದಲ್ಲಿ ರೆಸ್ಟೋರೆಂಟ್/ಹೋಟೆಲ್ (ಕಾಫೀ ಡೇ) ಪರವಾನಗಿ ನೀಡಬಾರದೆಂದು ಸುತ್ತಮುತ್ತಲಿನ 20ನೇ ಮುಖ್ಯರಸ್ತೆ, ನಿವಾಸಿಗಳಾದ ಡಬ್ಲ್ಯೂ.ಮೆನ್ಡೋಜ ನಂ.534, ಬಿ.ಮಹೇಶ್, ನಂ.544, ಈ.ಸ್ಟೀಪನ್, ನಂ.535, ಎಸ್.ಬಿ.ಬಾಬು, ನಂ.536 ಶ್ರೀ.ವೆಂಕಟೇಶಲು, ನಂ.538 ದೂರು ನೀಡಿರುತ್ತಾರೆ.
2. ದಿನಾಂಕ:01-09-2010ರಂದು ಶ್ರೀ.ಕೃಷ್ಣಮೂರ್ತಿ (ಇಂಜಿನಿಯರ್ ಇನ್ ಚೀಪ್ ಅಂಡ್ ಪ್ರೆಟರಿ ಪಿ.ಡಬ್ಲ್ಯೂಡಿ) ನಿವೃತ್ತಿರವರು ವಿಷಯಕ್ಕೆ ಸಂಬಂಧಪಟ್ಟ ಕಟ್ಟಡಕ್ಕೆ ರೆಸ್ಟೋರೆಂಟ್ ಪರವಾನಗಿ ನೀಡಬಾರದೆಂದು ಮಾನ್ಯ ಶಾಸಕರಿಗೆ ದೂರಿನ ಮುಖಾಂತರ ತಿಳಿಸಿರುತ್ತಾರೆ.



3. ದಿನಾಂಕ:09-09-2010ರಂದು ಈ ಮೇಲ್ಕಂಡ ವಿಳಾಸದ (19ನೇ ಮುಖ್ಯರಸ್ತೆ) ಅಕ್ಕಪಕ್ಕದ ನಿವಾಸಿಗಳು, ಶ್ರೀ.ದೇವಿ ಕೃಷ್ಣ, ಸಂಖ್ಯೆ:481, ಕೆ.ಎನ್.ಪಾರ್ವತಮ್ಮ, ಸಂಖ್ಯೆ:495 ಹಾಗೂ ಇತರರು ಉಪ ಆಯುಕ್ತರು (ದಕ್ಷಿಣ)ರವರಿಗೆ ಪರವಾನಗಿ ನೀಡಬಾರದೆಂದು ನಿವಾಸಿಗಳು ದೂರು ನೀಡಿರುತ್ತಾರೆ. ದೂರಿನ ಸಂಖ್ಯೆ:46/2010-11 ದಿನಾಂಕ:09-09-2010.

ಈ ಮೇಲ್ಕಂಡ ದೂರುಗಳನ್ನು ಹಾಗೂ ಸ್ಥಳ ಪರಿಶೀಲಿಸಿದಾಗ, ಸ್ಥಳವು ಸಿ.ಡಿ.ಪಿ.2015ರನುಸಾರ ವಸತಿ ಮುಖ್ಯ ಪ್ರದೇಶದಲ್ಲಿದ್ದು, ಕಟ್ಟಡವು ಉಪ ಆಯುಕ್ತರು (ದಕ್ಷಿಣ)ರವರು ಮಂಜೂರಾತಿ ಆದೇಶ ಸಂಖ್ಯೆ:ಡಿಸಿ.(ಎಸ್)ಎಲ್ ಪಿ 327/07-08 ದಿನಾಂಕ:0-06-08ರಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಮಂಜೂರಾತಿ ಪಡೆದಿರುತ್ತಾರೆ (ಶಾಪ್, ಆಫೀಸ್) ಸದರಿ ಪ್ರದೇಶದಲ್ಲಿ ಪರವಾನಗಿ ನೀಡಲು ಸುವರ್ಣ ಆರೋಗ್ಯ ಪರವಾನಗಿ-2007ರಲ್ಲಿರುವ ನಿಯಾಮಾನುಗಳನುಸಾರ ಅಕ್ಕಪಕ್ಕದವರ ನಿರಾಕ್ಷೇಪಣೆ ಅಗತ್ಯವಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಅಕ್ಕಪಕ್ಕದವರು ಆಕ್ಷೇಪಣೆ ಸಲ್ಲಿಸಿರುವುದರಿಂದ ಅರ್ಜಿದಾರರು ಕೋರಿರುವ ರೆಸ್ಟೋರೆಂಟ್ ಉದ್ದಿಮೆಯ ಬಗ್ಗೆ ದಿನಾಂಕ:18-09-2010ರಂದು ಈ ಕಛೇರಿಯಿಂದ ಹಿಂಬರಹ ಜಾರಿ ಮಾಡಲಾಗಿರುತ್ತದೆ. ಸಂಖ್ಯೆ:ಆ.ವೈ.(ಜ.ನ)/ಇ.ಸಿ.ಪಿ.ಆರ್/405/2010-11, ದಿನಾಂಕ:18-09-2010(ಪ್ರತಿ ಲಗತ್ತಿಸಿದೆ). ಈ ಹಿಂಬರಹದ ವಿರುದ್ಧ ಅರ್ಜಿದಾರರಾದ ಶ್ರೀ.ಶಾಂತಿಲಾಲ್ ರಿಕಬ್ ಚಾಂದ್,ರವರು ಅಪೀಲು ಸ್ಥಾಯಿ ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿರುವುದರಿಂದ ಸೂಕ್ತ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>ಪ್ರಸ್ತಾವನೆ:-</u> ಅರ್ಜಿದಾರರ ಪರವಾಗಿ ಅವರ ಅಳಿಯ ಜಂಬೂಕುಮಾರ್ ಹಾಜರಿದ್ದು, ಸದರಿ ಪ್ರದೇಶವು ಈಗ ವಾಣಿಜ್ಯ ಪ್ರದೇಶದಲ್ಲಿ ಬರುವುದಾಗಿ ತಿಳಿಸಿ ಉದ್ದಿಮೆ ಪರವಾನಗಿ ನೀಡುವಂತೆ ಕೋರಿರುತ್ತಾರೆ.

ಆಕ್ಷೇಪಣೆದಾರರ ಈ.ಸ್ಟೆಪನ್, ಎಸ್.ಬಿ.ಬಾಬು, ಶ್ರೀ.ಕೃಷ್ಣಮೂರ್ತಿ ಮತ್ತು ಇತರರು ಹಾಜರಿದ್ದು ಅವರ ಹೇಳಿಕೆಯನ್ನು ಪಡೆಯಲಾಯಿತು. ಎಸ್.ಬಿ.ಬಾಬುರವರು ತಮ್ಮ ಹೇಳಿಕೆಯಲ್ಲಿ ತಾವು ಪಕ್ಕದ ನಿವಾಸಿಯಾಗಿದ್ದು ಸದರಿ ಪ್ರದೇಶವು ಪೂರ್ಣ ವಸತಿ ಪ್ರದೇಶವಾಗಿದ್ದು ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ. ಕೃಷ್ಣಮೂರ್ತಿಯವರು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ಪೂರ್ಣ ವಸತಿ ಪ್ರದೇಶವಾಗಿದ್ದು ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಿದರೆ ರಸ್ತೆಯು ಕಿರಿದಾಗಿದ್ದು, ವಾಹನಗಳು ಓಡಾಡುವುದರಿಂದ ಹಾಗೂ ವಾಹನಗಳ ನಿಲುಗಡೆ ಮಾಡುವುದರಿಂದ ಮಾಲಿನ್ಯ ಕಸ ಸಂಗ್ರಹಣೆ, ಬೀದಿ ನಾಯಿಗಳ ಹಾವಳಿ ಉಂಟಾಗುವುದರಿಂದ ಅನುಮತಿ ನೀಡಬಾರದಾಗಿ ತಿಳಿಸಿರುತ್ತಾರೆ.

ದಿನಾಂಕ:07-01-2011ರಂದು ಸಮಿತಿಯು ಸ್ಥಳ ಪರಿಶೀಲನೆ ಮಾಡಲಾಗಿ ಪುಷ್ಪರಾಹ್ ಎಂಬ ಹೆಸರಿನ ರೆಸ್ಟೋರೆಂಟ್ ನಡೆಸಲು ಉದ್ದೇಶಿಸಿರುವ ಕಟ್ಟಡದ ಬಲ ಭಾಗದ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ಕೆನರಾ ಬ್ಯಾಂಕಿನ ಎ.ಟಿ.ಎಂ.ಕೌಂಟರ್ ಮತ್ತು ಬ್ಯಾಟರಿ ಶಾಪ್ ಇರುವುದನ್ನು ಸಮಿತಿಯು ಗಮನಿಸಿರುತ್ತದೆ. ಸದರಿ ಬಲ ಭಾಗದ (ನಂ.536) ಮನೆಯ ಮಾಲೀಕರು ರೆಸ್ಟೋರೆಂಟ್ ನಡೆಸಲು ಪರವಾನಗಿ ಪಡೆಯುವಂತೆ ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ. ಆಕ್ಷೇಪಣೆದಾರರಲ್ಲಿ ಒಬ್ಬರಾದ ಶ್ರೀ.ಎಸ್.ಬಿ.ಬಾಬುರವರು ಬ್ಯಾಟರಿ ಶಾಪ್ ನಡೆಸುತ್ತಿದ್ದು ಉದ್ದಿಮೆ ಪರವಾನಗಿಯನ್ನು ಪಡೆಯದೆ ಬ್ಯಾಟರಿ ಅಂಗಡಿಯನ್ನು ನಡೆಸುತ್ತಿರುತ್ತಾರೆ. ಶ್ರೀ.ಪಿ.ವಿ.ಎಸ್.ರೆಡ್ಡಿರವರು ಆಕ್ಷೇಪಣೆದಾರರಾಗಿದ್ದು, ಪೇಯಿಂಗ್ ಗೆಸ್ಟ್ ನಡೆಸುತ್ತಿದ್ದು ನಗರ ಪಾಲಿಕೆಯಿಂದ ಪರವಾನಗಿ ಪಡೆದಿರುವುದಿಲ್ಲ. ಎಡ ಭಾಗದಲ್ಲಿ 19ನೇ ಮುಖ್ಯರಸ್ತೆಯು ಬರುತ್ತದೆ. ಅಕ್ಕ ಪಕ್ಕದಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ರಸ್ತೆಯಲ್ಲಿ ವಾಹನ ನಿಲುಗಡೆ ಹಾಗೂ ರಸ್ತೆಯಲ್ಲಿ ಸಂಚಾರವು ಸಾಮಾನ್ಯವಾಗಿರುತ್ತದೆ. ಇದರಿಂದ ಅಕ್ಕ ಪಕ್ಕದವರಿಗೆ ಯಾವುದೇ ತೊಂದರೆ ಆಗದೇ ಇದ್ದು ಅರ್ಜಿದಾರರು ನಡೆಸಲು ಉದ್ದೇಶಿಸಿರುವ ರೆಸ್ಟೋರೆಂಟ್‌ನಿಂದ ಮಾತ್ರ ತೊಂದರೆ ಉಂಟಾಗುವುದಾಗಿ ಆಕ್ಷೇಪಣೆ ವ್ಯಕ್ತಪಡಿಸಿರುವುದು ಹಾಸ್ಯಾಸ್ಪದವಾಗಿರುವುದಲ್ಲದೆ ದುರುದ್ದೇಶದಿಂದ ಕೂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆಕ್ಷೇಪಣೆ ವ್ಯಕ್ತಪಡಿಸಿರುವ ಆಕ್ಷೇಪಣೆದಾರರಿಗೆ ಈ ಉದ್ದಿಮೆಯಿಂದ ಯಾವುದೇ ತೊಂದರೆಯುಂಟಾಗುವ ಸಂಭವವಿರುವುದಿಲ್ಲ. ಸದರಿ ಕಟ್ಟಡವನ್ನು ನಿರ್ಮಾಣ ಮಾಡುವಾಗ ವಾಣಿಜ್ಯ ಉದ್ದೇಶಕ್ಕಾಗಿ ಮಂಜೂರಾತಿ ಪಡೆದಿದ್ದು, ನಕ್ಷೆಯಲ್ಲಿ ತಿಳಿಸಿರುವಂತೆ ತಳಮಹಡಿಯನ್ನು ವಾಹನ ನಿಲುಗಡೆಗಾಗಿ ಮೀಸಲಿಟ್ಟಿರುವುದು ಕಂಡು ಬಂದಿರುತ್ತದೆ.

<u>ನಿರ್ಣಯ:-</u> ಪುಷ್ಪ ರಾಹ್ ಎಂಬ ಹೆಸರಿನ ರೆಸ್ಟೋರೆಂಟ್ ನಡೆಸಲು ಉದ್ದೇಶಿಸಿರುವ ಕಟ್ಟಡದ ಅಕ್ಕ ಪಕ್ಕ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ರಸ್ತೆಯಲ್ಲಿ ವಾಹನ ನಿಲುಗಡೆ ಹಾಗೂ ರಸ್ತೆಯಲ್ಲಿ ಸಂಚಾರವು ಸಾಮಾನ್ಯವಾಗಿರುತ್ತದೆ. ಇದರಿಂದ ಅಕ್ಕ ಪಕ್ಕದವರಿಗೆ ಯಾವುದೇ ತೊಂದರೆ ಆಗದೇ ಇದ್ದು ಅರ್ಜಿದಾರರು ನಡೆಸಲು ಉದ್ದೇಶಿಸಿರುವ ರೆಸ್ಟೋರೆಂಟ್‌ನಿಂದ ಮಾತ್ರ ತೊಂದರೆ ಉಂಟಾಗುವುದಾಗಿ ಆಕ್ಷೇಪಣೆ ವ್ಯಕ್ತಪಡಿಸಿರುವುದು ಸಮಂಜಸವಾಗಿರುವುದಿಲ್ಲ. ಅರ್ಜಿದಾರರು ರೆಸ್ಟೋರೆಂಟ್ ನಡೆಸಲು ಉದ್ದೇಶಿಸಿರುವ ಕಟ್ಟಡದಲ್ಲಿ ತಳ ಮಹಡಿಯನ್ನು ವಾಹನ ನಿಲುಗಡೆಗಾಗಿ ಮೀಸಲಿರಿಸಿರುವುದರಿಂದ ರಸ್ತೆಯಲ್ಲಿ ವಾಹನ ನಿಲುಗಡೆ ಮಾಡುವ ಅವಶ್ಯಕತೆ ಕಂಡು ಬರುವುದಿಲ್ಲ.



ಈ ಮೇಲ್ಕಂಡ ಅಂಶಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದ ನಂತರ ಆಕ್ಷೇಪಣೆದಾರರ ಆಕ್ಷೇಪಣೆಗಳನ್ನು ತಿರಸ್ಕರಿಸುತ್ತಾ, ಸುವರ್ಣ ಆರೋಗ್ಯ ಪರವಾನಗಿ 2007ರಲ್ಲಿರುವ ನಿಯಮಾನುಗಳನುಸಾರ ಉದ್ದಿಮೆ ನಡೆಸಲು ಉದ್ದೇಶಿಸಿರುವ ಕಟ್ಟಡದ ಬಲ ಭಾಗದ (ನಂ.536) ಮಾಲೀಕರು ರೆಸ್ಟೋರೆಂಟ್ ನಡೆಸಲು ಪರವಾನಗಿ ಪಡೆಯುವಂತೆ ನಿರಾಕ್ಷೇಪಣಾ ಪತ್ರ ನೀಡಿದ್ದು, ಎಡ ಭಾಗದಲ್ಲಿ ರಸ್ತೆ ಬರುವುದರಿಂದ ಪುಷ್ಪರಾಹ್ ಎಂಬ ಹೆಸರಿನ ರೆಸ್ಟೋರೆಂಟ್ ನಡೆಸಲು ಅರ್ಜಿದಾರರು ಕೋರಿರುವಂತೆ ಉದ್ದಿಮೆ ಪರವಾನಿಗಿಯನ್ನು ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

**<u>3.ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11</u>**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

''ಹೆಚ್ಚಿನ ಮಾಹಿತಿಗಾಗಿ ಮುಂದೂಡಿದೆ''

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:21-01-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಭೂಸ್ವಾಧೀನಾಧಿಕಾರಿ |
| 04 | ಶ್ರೀಧರ ರೆಡ್ಡಿ ಎಸ್.ಆರ್. | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| 05 | ಡಾ॥ಎಸ್.ರಾಜು | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಿಟಿಎಂ)/ಪದ್ಮನಾಭನಗರ) ವಲಯ |

| | | | |
|---|---|---|---|
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**1.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11**

ಶ್ರೀ.ಅಬ್ದುಲ್ ಕಾದಿರ್ ಪಿ.ಎಂ. (ಪ್ರತಿನಿಧಿ) ಮೆ:ಹೆಲ್ತ್ ವೇ ಮಡಿಕಲ್ ಡಯಾಗ್ನೋಸ್ಟಿಕ್, ನಂ. 393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರ-34 ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರ ನಿರಾಕರಿಸಿದ ಹಿಂಬರಹ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ಟಿಪ್ಪಣಿ.

ಪ್ರಸ್ತಾವನೆ:-ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

**"ಅರ್ಜಿದಾರರು ಕಾಲಾವಕಾಶ ಕೋರಿರುವುದರಿಂದ ಮುಂದೂಡಿದೆ"**

**2. ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

**"ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ)ಉಪ ವಿಭಾಗರವರ ವರದಿಗಾಗಿ ಮುಂದೂಡಿದೆ"**

**3. ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11**

ಸಂಖ್ಯೆ:27, 6ನೇ ಅಡ್ಡರಸ್ತೆ, ಸಂಪಂಗಿರಾಮನಗರ ವಾರ್ಡ್-110ರಲ್ಲಿ ಚಂದ್ರಪ್ಪ ಎಂಬುವವರು 15 ಅಶ್ವಶಕ್ತಿಗಳ ಪರವನಗಿಯನ್ನು ರದ್ದುಪಡಿಸಲು ಹಾಗೂ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ತಿಳಿಸಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ವಲಯರವರ ಟಿಪ್ಪಣಿ.

**"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"**

**4.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/08/2010-11**

ವಿಶೇಷ ಭೂಸ್ವಾಧೀನಾಧಿಕಾರಿಯವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೆಂಗಳೂರು ದಕ್ಷಿಣ ತಾಲ್ಲೂಕು, ಹಲಗೇವಡೇರಹಳ್ಳಿ ಗ್ರಾಮದ ಸರ್ವೇ ನಂ–58ರ ಜಮೀನಿನಲ್ಲಿ ರಚಿಸಲಾಗಿದ್ದ ನಿವೇಶನ ಸಂಖ್ಯೆ: 8 ರ 40x60 ಅಡಿ ನಿವೇಶನವನ್ನು ಶ್ರೀಮತಿ. ಪ್ರೇಮ



ಕೋಂ. ಸತ್ಯಬೋಧರಾವ್ ಇವರು ಎಸ್.ಆರ್ ನಂ. 3318/2002–03, ದಿನಾಂಕ: 30–05–2002ರ ಮೇರೆಗೆ ನಿರ್ಮಲಜಾನ್ ಕೋಂ. ಜಾನ್‌ಕುರುವಿಲ್ಲ ಇವರ ಜಿ.ಪಿ.ಎ ಹೋಲ್ಡರ್ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ.

ಕ್ರಯಕ್ಕೆ ಪಡೆದ ಈ ನಿವೇಶನದ 40x60 ಅಡಿ ವಿಸ್ತೀರ್ಣದ ಜಾಗವನ್ನು ಆಯುಕ್ತರು, ರಾಜರಾಜೇಶ್ವರಿ ನಗರ ಸಭೆ. ಇವರು ದೇವಾಡಿಗಸೌಧ ಹಾಗೂ ಬಂಗಾರಪ್ಪ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಗಲೀಕರಣ ಮಾಡುವ ಸಲುವಾಗಿ ಉಪಯೋಗಿಸಿಕೊಂಡಿರುತ್ತಾರೆಂದೂ, ಉಪಯೋಗಿಸಿಕೊಂಡ ಈ ಜಾಗಕ್ಕೆ ಪರಿಹಾರವನ್ನಾಗಲೀ ಅಥವಾ ಬದಲಿ ನಿವೇಶನವನ್ನಾಗಲೀ ನೀಡದೇ ಇದ್ದುದರಿಂದ ಸದರಿ ನಿವೇಶನದ ಕ್ರಯದಾರರಾದ ಶ್ರೀಮತಿ. ಪ್ರೇಮರವರು (1) ಉಪ ಆಯುಕ್ತರು, ರಾಜರಾಜೇಶ್ವರಿ ನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರುಗಳ ವಿರುದ್ಧ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 18333/2007 (LA-RES) ಅನ್ನು ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ದಿನಾಂಕ: 03–03–2009 ಆದೇಶದಲ್ಲಿ ಈ ಕೆಳಗೆ ಕಾಣಿಸಿರುವಂತೆ ಆದೇಶ ನೀಡಿರುತ್ತದೆ.

“Petition stands disposed of directing respondents 1 and 2 to consider the representation /legal notice within an outer limit of three months from the date of receipt of a copy of this order. The respondents shall also take note of the communication at Annexure-G in this regard. Petition stands disposed of accordingly.

ಉಚ್ಚ ನ್ಯಾಯಾಲಯದ ದಿನಾಂಕ: 03–03–2009ರ ಆದೇಶವನ್ನು ಜಾರಿಗೊಳಿಸಲಿಲ್ಲ ಎಂಬ ಕಾರಣದಿಂದ ನಿವೇಶನದ ಕ್ರಯದಾರರಾದ ಶ್ರೀಮತಿ. ಪ್ರೇಮರವರು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ಮತ್ತು ಉಪ ಆಯುಕ್ತರು, ರಾಜರಾಜೇಶ್ವರಿ ನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ಇವರ ವಿರುದ್ಧ 27–10–2009 ರಂದು ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ: ಸಿಸಿಸಿ.518/2009(ಸಿವಿಲ್) ಅನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ನಂತರ ಅಪರ ಆಯುಕ್ತರು, ರಾಜರಾಜೇಶ್ವರಿ ನಗರ. ಇವರು ರಸ್ತೆ ನಿರ್ಮಾಣಕ್ಕೆ ಉಪಯೋಗಿಸಿಕೊಂಡಿರುವ ಶ್ರೀಮತಿ. ಪ್ರೇಮರವರಿಗೆ ಸೇರಿರುವ ಜಾಗವನ್ನು ಅಧಿಕೃತವಾಗಿ ಸ್ವಾಧೀನ ಪಡಿಸಿಕೊಳ್ಳಲು ದಿನಾಂಕ: 06–10–2009 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. **ಉಚ್ಚನ್ಯಾಯಾಲಯದಲ್ಲಿ ಅಪರ ಆಯುಕ್ತರು, ರಾಜರಾಜೇಶ್ವರಿ ನಗರ. ಇವರು ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದು, ಪರಿಹಾರ ಪಾವತಿಸಲು ಕ್ರಮಕೈಗೊಂಡಿರುವ ಬಗ್ಗೆ ನ್ಯಾಯಾಲಯದಲ್ಲಿ ಹೇಳಿಕೆ ಸಲ್ಲಿಸಿದ್ದರಿಂದ ಅದನ್ನು ಪರಿಗಣಿಸಿ, ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 27–10–2009 ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.**

## ORDER

The submission of the counsel appearing for the accused discloses the fact that acquisition proceedings are initiated and even determination of compensation is arrived at, but for the passing of the award the proceedings have reached finality.

Under the circumstances directing the respondent-accused to dispose of the matter within three months, the proceedings are closed.

ಉಚ್ಚ ನ್ಯಾಯಾಲಯದ ದಿನಾಂಕ: 27–10–2009 ರ ಆದೇಶದನ್ವಯ ಸ್ವತ್ತಿನ ಕ್ರಯದಾರರಿಗೆ ಪರಿಹಾರ ಪಾವತಿಸಲು 3 ತಿಂಗಳಗೊಳಗಾಗಿ ತುರ್ತು ಕ್ರಮ ಕೈಗೊಳ್ಳಲು ಆದೇಶ ನೀಡಿರುತ್ತದೆಯೇ ಹೊರತು **ಸ್ವತ್ತಿನ ಖಾತೆದಾರರಿಗೆ ಪರ್ಯಾಯ ನಿವೇಶನವನ್ನು ಮಂಜೂರು ಮಾಡುವಂತೆ ನ್ಯಾಯಾಲಯವು ನಿರ್ದೇಶನ ನೀಡಿರುವುದಿಲ್ಲ.**

ಮೇಲ್ಕಂಡ ನಿರ್ದೇಶನವನ್ನು ಅನುಸರಿಸಿ ಈ ಪ್ರಕರಣದ ಆಸ್ತಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ, ಆಡಳಿತಗಾರರು ದಿನಾಂಕ: 14–10–2009 ರಂದು ವಿಷಯದ ಸಂಖ್ಯೆ: 348/2009–10 ರಲ್ಲಿ ನಡವಳಿ ನಡೆಸಿ, ಈ ಪ್ರಕರಣದ ಸ್ವತ್ತಿನ 2400 ಚ.ಅ ಜಾಗವನ್ನು ರಸ್ತೆ ಅಗಲೀಕರಣಕ್ಕೆ ಉಪಯೋಗಿಸಿಕೊಂಡಿರುವುದರಿಂದ ಅದನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಹಾಗೂ ಇದರ ಪರಿಹಾರ ಇತರೆ ವೆಚ್ಚಗಳನ್ನು ಭರಿಸಲು ಒಪ್ಪಿಗೆ ನೀಡಿರುತ್ತಾರೆ. ಆಡಳಿತಗಾರರ ದಿನಾಂಕ: 14–10–2009 ರ ನಡವಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರು 1976ರ ಕರ್ನಾಟಕ ಮುನಿಸಿಪಾಲ್ ಕಾರ್ಪೋರೇಷನ್ ಕಾಯ್ದೆಯ ಕಲಂ.175 ರನ್ವಯ ಪತ್ರದ ಸಂಖ್ಯೆ: ನ.ಅ.ಇ 188/ಎಮ್ಎನ್‌ಜಿ 2009 ದಿನಾಂಕ: 07–01–10 ರ ಮೇರೆಗೆ ಅನುಮೋದನೆಯನ್ನು ನೀಡಿರುತ್ತಾರೆ.



ಸರ್ಕಾರದ ಅನುಮೋದನೆಯನ್ನು ಆಧರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.4(1) ರನ್ವಯ ಪ್ರಾರಂಭಿಕ ಅಧಿಸೂಚನೆಯನ್ನು ಎಲ್ಎಕ್ಯೂ/ಸಿಆರ್/25/2009–10 ದಿನಾಂಕ: 7–1–2010 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಹೊರಡಿಸಿರುತ್ತಾರೆ.

ಪ್ರಾರಂಭಿಕ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 7–1–2010 ರಂದು ಭಾಗ ಸಂಖ್ಯೆ: 3, ಪುಟ ಸಂಖ್ಯೆ: 159–160 ರಲ್ಲಿ ಪ್ರಕಟವಾಗಿರುತ್ತದೆ, ಹಾಗೂ ದಿನಾಂಕ: 12–1–2010 ರ ಕನ್ನಡ ಪ್ರಭ ಮತ್ತು ಪ್ರಜಾವಾಣಿ ದಿನ ಪತ್ರಿಕೆಗಳಲ್ಲೂ ಪ್ರಕಟವಾಗಿರುತ್ತದೆ.

1894 ರ ಭೂಸ್ವಾಧೀನ ಕಾಯ್ದೆಯ ಕಲಂ. 5 (ಎ) ರನ್ವಯ ವಿಚಾರಣೆಯನ್ನು ನಡೆಸಲಾಗಿದ್ದು, ವಿಚಾರಣೆ ಸಮಯದಲ್ಲಿ ನಿವೇಶನದ ಕ್ರಯದಾರರು ಪರಿಹಾರದ ಹಣ ಬೇಡವೆಂತಲೂ, ಬದಲಾಗಿ 40x60 ರ ನಿವೇಶನವನ್ನು ಮಂಜೂರು ಮಾಡಲು ಕೋರಿರುತ್ತಾರೆ. ಆದರೆ ಆಯುಕ್ತರು ದಿನಾಂಕ: 14–12–2009 ರಂದು ಎಲ್ಎಸಿಸಿಆರ್/22/2008–09 ರಂದು ಸುತ್ತೋಲೆಯನ್ನು ಹೊರಡಿಸಿ, ಈ ಕೆಳಗೆ ಕಾಣಿಸಿರುವಂತೆ ನಿರ್ದೇಶನ ನೀಡಿರುತ್ತಾರೆ.

1. <u>**ಯಾವುದೇ ಪ್ರಕರಣಗಳಲ್ಲಿ ಬದಲೀ ನಿವೇಶನ ನೀಡಬೇಕೆಂದು ಪಾಲಿಕೆ ವಿರುದ್ಧ ನ್ಯಾಯಾಲಯಗಳಲ್ಲಿ ದಾವೆಯನ್ನು ಹೂಡಿದ್ದಲ್ಲಿ ಇಂತಹ ಪ್ರಕರಣಗಳಲ್ಲಿ ಪಾಲಿಕೆ ಪರವಾಗಿ ಹಾಜರಾಗುವ ವಕೀಲರು ಬದಲೀ ನಿವೇಶನ ನೀಡುವ ಕೋರಿಕೆಯನ್ನು ಕಟುವಾಗಿ ತಮ್ಮ ಲಿಖಿತ ಮತ್ತು ಮೌಖಿಕ ವಾದದಲ್ಲಿ ನ್ಯಾಯಾಲಯದ ಮುಂದೆ ಮಂಡಿಸತಕ್ಕದ್ದು, ಒಂದು ವೇಳೆ ಇಷ್ಟೆಲ್ಲಾ ಲಿಖಿತ ವಾದ ಅಥವಾ ಮೌಖಿಕ ವಾದ ಮಂಡಿಸಿದ ನಂತರವೂ ಸಹ ನ್ಯಾಯಾಲಯವು ಬದಲೀ ನಿವೇಶನ ನೀಡಲು ಆದೇಶ ಮಾಡಿದ್ದಲ್ಲಿ ಈ ಆದೇಶದ ವಿರುದ್ಧ ಮೇಲ್ಮನವಿಯನ್ನು ತಕ್ಷಣವೇ ಕಾನೂನು ಕೋಶದ ಮುಖ್ಯಸ್ಥರು ದಾಖಲಿಸತಕ್ಕದ್ದು ಹಾಗೂ ಅಗತ್ಯವಿದ್ದಲ್ಲಿ ಕೇವಿಯಟ್ ದಾಖಲಿಸತಕ್ಕದ್ದು.**</u>
2. <u>**ಯಾವುದೇ ವಕೀಲರು ಆಯುಕ್ತರ ಲಿಖಿತ ಒಪ್ಪಿಗೆ ಅಥವಾ ಅನುಮೋದನೆ ಇಲ್ಲದೆ ನ್ಯಾಯಾಲಯದ ಮುಂದೆ ಬದಲೀ ನಿವೇಶನ ನೀಡುವ ಬಗ್ಗೆ ಒಪ್ಪಿಗೆ ನೀಡಿದಲ್ಲಿ ಅಂತಹ ವಕೀಲರನ್ನು ಪಾಲಿಕೆಯ ವಕೀಲರ ಹುದ್ದೆಯಿಂದ ವಜಾ ಮಾಡಲು ಕಾನೂನು ಕೋಶದ ಮುಖ್ಯಸ್ಥರು ತಕ್ಷಣವೇ ಕ್ರಮ ಜರುಗಿಸತಕ್ಕದ್ದು.**</u>
3. <u>**ಯಾವುದೇ ಕಾರಣಕ್ಕೂ ಭೂಸ್ವಾಧೀನ ಪ್ರಕರಣಗಳಲ್ಲಿ ಬದಲೀ ನಿವೇಶನ ನೀಡಲು ಅವಕಾಶವಿರುವುದಿಲ್ಲ. ಕೇವಲ ಭೂಸ್ವಾಧೀನ ಪರಿಹಾರದ ಹಣ ಅಥವಾ ಟಿ.ಡಿಆರ್ ಯೋಜನೆ ಅನ್ವಯ ಡಿ.ಆರ್.ಸಿ. ಹಕ್ಕುಗಳನ್ನು ನೀಡಲು ಮಾತ್ರ ಅವಕಾಶವಿರುತ್ತದೆ, ಬದಲೀ ನಿವೇಶನ ನೀಡಲು ಪಾಲಿಕೆಯಲ್ಲಿ ಯಾವುದೇ ನಿವೇಶನಗಳ ಲಭ್ಯತೆ ಇಲ್ಲವೆಂಬ ಅಂಶವನ್ನು ಪಾಲಿಕೆಯ ಎಲ್ಲಾ ಅಧಿಕಾರಿಗಳು ಹಾಗೂ ಕಾನೂನುಶಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಪಾಲಿಕೆಯ ವಕೀಲರು ಗಮನದಲ್ಲಿಟ್ಟುಕೊಳ್ಳತಕ್ಕದ್ದು.**</u>
4. <u>**ಯಾವುದೇ ಪ್ರಕರಣದಲ್ಲಿ ಬದಲೀ ನಿವೇಶನ ನೀಡಬೇಕೆಂದು ನ್ಯಾಯಾಲಯದಲ್ಲಿ ಆದೇಶವಾದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಕಾನೂನುಕೋಶದ ಮುಖ್ಯಸ್ಥರು, ಲಿಖಿತ ವಾದ ಮಂಡಿಸಿರುವ ವಕೀಲರು, ಕಂಡಿಕೆವಾರು ಉತ್ತರಗಳನ್ನು ಸಲ್ಲಿಸಿರುವ ಅಧಿಕಾರಿಗಳ ವಿರುದ್ಧ ಯಾವುದೇ ಕರ್ತವ್ಯ ಲೋಪ ಇದ್ದಲ್ಲಿ ಅದನ್ನು ಗಮನಿಸಿ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲು ಶಿಫಾರಸ್ಸು ಮಾಡುವುದು.**</u>

ಉಚ್ಚನ್ಯಾಯಾಲಯದ ದಿನಾಂಕ: 27–10–2009 ರ ಆದೇಶವನ್ನು ಅನುಸರಿಸಿ ಹಾಗೂ ದಿನಾಂಕ: 14–12–2009ರ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಅನುಸರಿಸಿ ಭೂಸ್ವಾಧೀನ ಪಡಿಸಿಕೊಂಡ ನಿವೇಶನಕ್ಕೆ ಪರ್ಯಾಯವಾಗಿ ಪರಿಹಾರದ ಹಣ ಹೊರತುಪಡಿಸಿ ಬದಲೀ ನಿವೇಶನವನ್ನು ನೀಡಲು ಅವಕಾಶವಿಲ್ಲದೆವಿರುವುದರಿಂದ ತಮ್ಮ ಕೋರಿಕೆಯನ್ನು ಪರಿಗಣಿಸಲು ಅವಕಾಶವಿಲ್ಲವೆಂದು, ಪರಿಹಾರದ ಬಾಬ್ತು ಶೇಕಡ 80ರಷ್ಟು ಮೊಬಲಗು ರೂ 7,32,883 ಗಳ ಚೆಕ್‌ನ್ನು ಲಗತ್ತಿಟ್ಟು ರವಾನಿಸಲಾಗಿತ್ತು, ಆದರೆ ಅವರು ಈ ಚೆಕ್ ಸ್ವೀಕರಿಸಲು ನಿರಾಕರಿಸಿರುತ್ತಾರೆ. ಈ ವಿಚಾರದಲ್ಲಿ ಸದರಿಯವರಿಗೆ ದಿನಾಂಕ: 6–5–2010 ರಂದು ಹಿಂಬರಹ ನೀಡುವುದರ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಉಚ್ಚನ್ಯಾಯಾಲಯದ ಆದೇಶವನ್ನು ಮತ್ತು ಆಯುಕ್ತರ ನಿರ್ದೇಶನವನ್ನು ಪರಿಗಣಿಸದೇ ನಿವೇಶನವನ್ನು ಈ ಪ್ರಕರಣದಲ್ಲಿ ನೀಡಿದಲ್ಲಿ ಮುಂದೆ ಭೂಸ್ವಾಧೀನ ಪಡಿಸಿಕೊಳ್ಳುವ ಅಸ್ತಿಗಳ ಎಲ್ಲಾ ಖಾತೆದಾರರುಗಳಿಗೂ ಇದು ಒಂದು ಪೂರ್ವ ನಿದರ್ಶನವಾಗುತ್ತದೆ. (ಪ್ರಿಸಿಡೆಂಟ್) ಹಾಗೂ ಇದರಿಂದ ಪಾಲಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿರುತ್ತದೆ.

ಅಲ್ಲದೇ ಈ ಪ್ರಕರಣದ ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣಕ್ಕೆ ರೂ. 11,47,590/– ಗಳ ಐ–ತೀರ್ಪನ್ನು ರಚಿಸಿದ್ದು, ಈ ಐ–ತೀರ್ಪನ್ನು ಪ್ರಧಾನಕಾರ್ಯದರ್ಶಿಗಳು ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರು ತಮ್ಮ ಕಛೇರಿ ಪತ್ರದ ಸಂಖ್ಯೆ: ಕಂಇ 130 ಭೂ.ಸ್ವಾ.ಬೆ 2010 ದಿನಾಂಕ: 10–12–2010ರ ಮೇರೆಗೆ ಅನುಮೋದನೆ ನೀಡಿರುತ್ತಾರೆ.



ಸರ್ಕಾರದ ಈ ಅನುಮೋದನೆಯನ್ನು ಅನುಸರಿಸಿ ಶ್ರೀಮತಿ ಪ್ರೇಮ ಕೋಂ. ಸತ್ಯಬೋಧರಾವ್ ಇವರಿಗೆ ದಿನಾಂಕ: 18–12–2010 ರಂದು ಅವಾರ್ಡ್ ತಿಳುವಳಿಕೆಯನ್ನು ನೀಡಿ ದಾಖಲಾತಿಗಳನ್ನು ಒದಗಿಸಿ, ಪರಿಹಾರದ ಮೊಬಲಗನ್ನು ಪಡೆದುಕೊಳ್ಳಲು ತಿಳಿಸಲಾಗಿರುತ್ತದೆ.

ಆದರೆ ಸದರಿಯವರು ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ಬಿಬಿಎಂಪಿ ಇವರಿಗೆ ಮನವಿ ಸಲ್ಲಿಸಿ ಘನ ನ್ಯಾಯಾಲಯದ ಆದೇಶದಂತೆ 40x60 ಅಡಿಗಳ ಖಾಲಿ ನಿವೇಶನವನ್ನು ಮಂಜೂರು ಮಾಡಲು ಕೋರಿರುವ ಬಗ್ಗೆ ಮೇಲ್ಮನವಿ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ ಬಗ್ಗೆ.

<u>**ಪ್ರಸ್ತಾವನೆ:**</u>-ಕಡತವನ್ನು ಪರಿಶೀಲಿಸಲಾಯಿತು. ಅಪೀಲುದಾರರ ಪರವಾಗಿ ಅವರ ಪತಿಯವರಾದ ಶ್ರೀ.ಎಸ್.ಸತ್ಯಭೋದರಾವ್ ರವರು ಹಾಜರಿದ್ದು, ನಮ್ಮ ಸ್ವತ್ತಾದ 40x60 ಭೂಸ್ವಾಧೀನ ಪಡಿಸಿಕೊಂಡಿದ್ದು, ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣಕ್ಕೆ ರೂ.11,47,590/- ಹಣಕ್ಕೆ ಬದಲಾಗಿ 30x40 ಅಡಿ ಅಳತೆಯ ಬದಲಿ ನಿವೇಶವನ್ನು ನೀಡುವಂತೆ ಕೋರಿಕೊಂಡರು.

ಸಭೆಯಲ್ಲಿ ಹಾಜರಿದ್ದ ಭೂಸ್ವಾಧೀನಾಧಿಕಾರಿಗಳು ಈಗಾಗಲೇ ಸದರಿ ಪ್ರಕರಣದಲ್ಲಿ ಸರ್ಕಾರದ ಮಟ್ಟದಲ್ಲಿ ಐ-ತೀರ್ಪಾಗಿರುವುದರಿಂದ ಸದರಿಯವರ ಮನವಿಯನ್ನು ಪರಿಗಣಿಸಲು ಬರುವುದಿಲ್ಲ. ಅವರಿಗೆ ಬೇಕಾದಲ್ಲಿ ಸಿವಿಲ್

ನ್ಯಾಯಾಲಯದಲ್ಲಿ ದಾವೆ ದಾಖಲಿಸಿಕೊಳ್ಳಬಹುದಾಗಿರುತ್ತದೆಂದು ತಿಳಿಸಿರುತ್ತಾರೆ. ಹಾಜರಿದ್ದ ಉಪ ಕಾನೂನು ಅಧಿಕಾರಿಯವರು ಈಗಾಗಲೇ ಸರ್ಕಾರದ ಮಟ್ಟದಲ್ಲಿ ಐ-ತೀರ್ಪಾಗಿರುವುದರಿಂದ ಸಮಿತಿಯು ಐ-ತೀರ್ಪಿನ ವಿರುದ್ಧ ಕ್ರಮ ಕೈಗೊಳ್ಳಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ.

**<u>ನಿರ್ಣಯ</u>:- ಸಮಿತಿಯು ಕಡತವನ್ನು ಹಾಗೂ ಅಪೀಲುದಾರರ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈಗಾಗಲೇ ಸರ್ಕಾರದ ಹಂತದಲ್ಲಿ ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣಕ್ಕೆ ರೂ.11,47,590/-ಗಳ ಐ-ತೀರ್ಪಿತ್ತಿರುವುದರಿಂದ ಅಪೀಲುದಾರರ ಮನವಿಯನ್ನು ಪರಿಗಣಿಸುವ ಬಗ್ಗೆ ಸರ್ಕಾರಕ್ಕೆ ಮತ್ತೊಮ್ಮೆ ಕಡತವನ್ನು ಕಳುಹಿಸಿಕೊಡಲು ಆಯುಕ್ತರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.**

**<u>5.ವಿಷಯ:ಸಂಖ್ಯೆ:ಅಸ್ಥಾಸ/(ತೆ)/09/2010-11</u>**

ಸ್ವತ್ತಿನ ಸಂಖ್ಯೆ:86/3 ಮತ್ತು 86/4, ಕೋಲ್ಸ್ ರಸ್ತೆ, ವಾರ್ಡ್-78ರ ಸ್ವತ್ತಿನ ಕಂದಾಯ ನಿಗಧಿಪಡಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ರಾಜ್ ಬಹದ್ದೂರ್‌ರವರು ಕಂದಾಯ ಕಡಿಮೆ ಮಾಡಿಕೊಡುವ ಬಗ್ಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ಟಿಪ್ಪಣಿ.

**"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"**

**<u>6.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/10/2010-11</u>**

ವಾರ್ಡ್-ನಂ.56, ನಿವೇಶನ ನಂ.2466, 24ನೇ ಅಡ್ಡ ರಸ್ತೆ, ಬನಶಂಕರಿ 2ನೇ ಹಂತ, ಗಣೇಶ ಮಂದಿರ ಈ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕರಾದ ಶ್ರೀ.ಎನ್.ಎಸ್.ನಾಗರಾಜ್ ಮತ್ತು ಶ್ರೀಮತಿ.ಎನ್.ಮಲ್ಲಿಕಾರವರು ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ವಿದ್ಯುತ್ ಸರಬರಾಜು ವ್ಯವಸ್ಥೆಗೆ ರಸ್ತೆ ಅಗೆತ ಕೋರಿದ್ದು, ಸದರಿಯವರ ಮನವಿಯನ್ನು ದಿನಾಂಕ:20-8-2010ರಂದು ತಿರಸ್ಕರಿಸಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿರುವ ಬಗ್ಗೆ ಮೇಲ್ಮನವಿ ತೀರ್ಮಾನಕ್ಕಾಗಿ ಮಂಡಿಸಿರುವ ಬಗ್ಗೆ.

<u>ಪ್ರಸ್ತಾವನೆ</u>:- ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರ ಪರವಾಗಿ ಹಾಜರಿದ್ದ ವಕೀಲರು ವಾದ ಮಂಡಿಸಿ ಅಪೀಲುದಾರರು ಮೇಲ್ಕಂಡ ಸ್ವತ್ತಿನಲ್ಲಿ ನಿರ್ಮಿಸಿರುವ ವಾಣಿಜ್ಯ ಕಟ್ಟಡಕ್ಕೆ ಮೂಲ ಭೂತ ಸೌಕರ್ಯಗಳಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆಗೆ ರಸ್ತೆ ಕಡಿತ ಕೋರಿ ಅರ್ಜಿ ಸಲ್ಲಿಸಲಾಗಿ, ಅಪೀಲುದಾರರು ನಿರ್ಮಿಸಿರುವ ಕಟ್ಟಡದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ರಸ್ತೆ ಕಡಿತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ)ವಲಯರವರು ತಿರಸ್ಕರಿಸಿರುತ್ತಾರೆ. ಆದರೆ ರಿಟ್ ಪಿಟಿಷನ್ ಸಂಖ್ಯೆ:30529/2004 ಮತ್ತು 12022/2008ಗಳಲ್ಲಿ ಆದೇಶಿಸಿರುವಂತೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ಅನುಮತಿ ನೀಡಬಹುದಾಗಿರುತ್ತದೆ. ಆದುದರಿಂದ ಸದರಿ ಪ್ರಕರಣದ



ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ರಸ್ತೆ ಅಗೆತಕ್ಕ ಅನುಮತಿ ನೀಡುವಂತೆ ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಉಪ ಕಾನೂನು ಅಧಿಕಾರಿಗಳು ಪ್ರಕರಣವು ನ್ಯಾಯಾಲದಲ್ಲಿರುವುದರಿಂದ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಉಪ ಕಾನೂನು ಅಧಿಕಾರಿಗಳು ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾಗಿದ್ದಾಗ ಯಾವ ಕಾಯ್ದೆಯಡಿ ರಸ್ತೆ ಅಗೆತಕ್ಕೆ ಪರವಾನಗಿ ನೀಡಲು ಬರುವುದಿಲ್ಲವೆಂದು ತಿಳಿಸಿರುವುದಿಲ್ಲ. ಹಾಗೂ ಅಪೀಲುದಾರರಿಗೆ ರಸ್ತೆ ಅಗೆತವನ್ನು ತಿರಸ್ಕರಿಸಲಾಗಿದೆಂದು ನೀಡಿರುವ ಪತ್ರದಲ್ಲೂ ಸಹ ಸಕಾರಣಗಳನ್ನು ನೀಡದೆ ನ್ಯಾಯಾಲದಯಲ್ಲಿ ದಾವೆ ಇರುವುದರಿಂದ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿರಸ್ಕರಿಸಿರುವುದನ್ನು ಸಮಿತಿಯು ಗಮನಿಸಿರುತ್ತದೆ.

<u>ನಿರ್ಣಯ</u>:- ಸಮಿತಿಯು ವಕೀಲರ ವಾದ ಹಾಗೂ ರಿಟ್ ಪಿಟಿಷನ್‌ಗಳನ್ನು ಮತ್ತು ಕಡತದ ಟಿಪ್ಪಣಿಯಲ್ಲಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳು ಅತಿ ಅವಶ್ಯಕವಾಗಿದ್ದು ಅಪೀಲುದಾರರು ವಾರ್ಡ್-ನಂ.56, ನಿವೇಶನ ನಂ.2466, 24ನೇ ಅಡ್ಡ ರಸ್ತೆ, ಬನಶಂಕರಿ 2ನೇ ಹಂತ, ಗಣೇಶ ಮಂದಿರ ಈ ಸ್ವತ್ತಿನಲ್ಲಿ ನಿರ್ಮಿಸಿರುವ ವಾಣಿಜ್ಯ ಕಟ್ಟಡಕ್ಕೆ ನ್ಯಾಯಾಲಯದಲ್ಲಿರುವ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಈ ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

:ಸಹಿ:
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-01-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಿಟಿಎಂ)/ಶಿವಾಜಿನಗರ) ವಲಯ |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**01.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11**

ಶ್ರೀ.ಅಬ್ದುಲ್ ಖಾದಿರ್ ಪಿ.ಎಂ. (ಪ್ರತಿನಿಧಿ), ಮೆ॥ಹೆಲ್ತ್ ವೇ ಮೆಡಿಕಲ್ ಡಯಾಗ್ನೋಸ್ಟಿಕ್, ನಂ.393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರು-34ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರು ನಿರಾಕರಿಸಿದ ಹಿಂಬರಹದ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ಟಿಪ್ಪಣಿ.

**ಪ್ರಸ್ತಾನೆ**:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

''ಆದೇಶಕ್ಕಾಗಿ ಕಾಯ್ದಿರಿಸಿದೆ''

**02.ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

**ಪ್ರಸ್ತಾನೆ**:- ಹೋಟೆಲ್ ಜನರೇಟ್‌ರನ್ನು ಪಾದಚಾರಿ ರಸ್ತೆಯ ಮೇಲೆ ಅಳವಡಿಸಿಕೊಂಡಿರುತ್ತಾರೆಂದು ಸಮಿತಿಗೆ ದೂರು ಬಂದ ಹಿನ್ನೆಲೆಯಲ್ಲಿ ದಿನಾಂಕ:15-12-2010ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಆ ಸಂದರ್ಭದಲ್ಲಿ ಹೋಟೆಲ್ ಮಾಲೀಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಯಾವುದೇ ಆರೋಗ್ಯ ಪರವಾನಗಿ, ಉದ್ದಿಮೆ ಪರವಾಗಿಯನ್ನು ಪಡೆಯದೆ ಹೋಟೆಲ್ ಹಾಗೂ ಮೊದಲನೇ ಮತ್ತು ಎರಡನೇ ಮಹಡಿಯಲ್ಲಿ ಪಾರ್ಟಿ ಹಾಲ್ ನಡೆಸುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ವಾಹನ ನಿಲ್ದಾಣಕ್ಕೆ ಉಪಯೋಗಿಸಬೇಕಾಗಿರುವ ತಳಮಹಡಿಯನ್ನು ಊಟದ ಕೊಠಡಿಯಾಗಿ ಉಪಯೋಗಿಸುತ್ತಿರುವುದು ಕಂಡು ಬಂದಿರುತ್ತದೆ.

ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಯವರನ್ನು ವಿಚಾರಿಸಲಾಗಿ ಈ ವಿಷಯವು ನನಗೆ ತಿಳಿದಿರುವುದಿಲ್ಲವೆಂದು ಸ್ಥಳದಲ್ಲಿ ಉತ್ತರ ನೀಡಿರುತ್ತಾರೆ. ಈ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಕೂಡಲೇ ಸದರಿ ಹೋಟೆಲ್ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೌಖಿಕವಾಗಿ ಸಮಿತಿಯು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಯವರಿಗೆ ಆದೇಶಿಸಲಾಗಿತ್ತು. ಸದರಿ ಆದೇಶದ ಪ್ರಕಾರ ಆರೋಗ್ಯ ವೈದ್ಯಾಧಿಕಾರಿ (ಪದ್ಮನಾಭನಗರ)ವಲಯರವರು ಸದರಿ ಹೋಟೆಲ್‌ನ್ನು ಮಧ್ಯಾಹ್ನ 2.30ರಲ್ಲಿ ಮುಚ್ಚಿಸಿರುವುದಾಗಿ ಛಾಯಾ ಚಿತ್ರಗಳ ಸಮೇತ ವರದಿಯನ್ನು ಸಮಿತಿಗೆ ಮಂಡಿಸಿದ್ದರು.

-2-

ಆದರೆ ಹೋಟೆಲ್‌ನ್ನು ಮುಚ್ಚಿದ ನಂತರ ಯಾವುದೇ ಮೇಲಾಧಿಕಾರಿಗಳ ಆದೇಶವನ್ನು ಪಡೆಯದೆ ಏಕಾಏಕಿ ಹೋಟೆಲ್ ನಡೆಯುತ್ತಿರುವುದು ಕಂಡು ಬಂದಿದ್ದು ಈ ಬಗ್ಗೆ ಸಮಿತಿಯು ಸದರಿ ವಿಷಯವನ್ನು ಸಮಿತಿಯ ಮುಂದೆ ಚರ್ಚೆಗೆ ತೆಗೆದುಕೊಂಡು ಪ್ರಕರಣವನ್ನು ಕರೆಯಲಾಯಿತು.

ಸದರಿ ವಿಚಾರಣೆಯಲ್ಲಿ ಹಾಜರಿದ್ದ ಆರೋಗ್ಯ ವೈದ್ಯಾಧಿಕಾರಿ (ಪದ್ಮನಾಭನಗರ)ರವರು ಹೇಳಿಕೆ ನಿಡಿ ನಾನು ದಿನಾಂಕ:22-10-2009ರಿಂದ ಆರೋಗ್ಯ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ದಿನಾಂಕ:15-12-2010ರಂದು ಅಪೀಲು ಸ್ಥಾಯಿ ಸಮಿತಿಯು ಅಕ್ಷಯ ವೆಜ್ ತಿಂಡೀಸ್ ಹೋಟೆಲ್‌ನ್ನು ಸ್ಥಳ ತನಿಖೇ ಮಾಡಿದಾಗ ಹಾಜರಿರುತ್ತೇನೆ. ಅಪೀಲು ಸ್ಥಾಯಿ ಸಮಿತಿಯು ಸದರಿ ಹೋಟೆಲ್ ನಡೆಯುತ್ತಿರುವ ಬಗ್ಗೆ ಉದ್ದಿಮೆ ಪರವಾನಗಿ ಪಡೆದಿರುವ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಆ ಸಮಯದಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಸ್ಥಳದಲ್ಲಿ ವಿಚಾರಣೆ ಮಾಡಲಾಗಿ ಸದರಿ ಹೋಟೆಲ್‌ರವರು ಯಾವುದೇ ಉದ್ದಿಮೆ ಪರವಾನಗಿ ಪಡೆಯದೇ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿರುವುದು ನನ್ನ ಗಮನಕ್ಕೆ ಬಂದಿರುತ್ತದೆ.

ನಂತರ ಅನಧಿಕೃತವಾಗಿ ನಡೆಯುತ್ತಿದ್ದ ಹೋಟೆಲ್ ಉದ್ದಿಮೆಯ ಮಾಲೀಕರಿಗೆ ತಿಳುವಳಿಕೆ ನೀಡಿ ಹೋಟೆಲ್‌ನ್ನು ಮುಚ್ಚಿಸಿ ವರದಿಯನ್ನು ಅಪೀಲು ಸ್ಥಾಯಿ ಸಮಿತಿಗೆ ದಿನಾಂಕ:15-12-2010ರಂದು ಮಧ್ಯಾಹ್ನ 2-30ಗಂಟೆಗೆ ಛಾಯಾಚಿತ್ರ ಸಲ್ಲಿಸಿರುತ್ತೇನೆ. ತದನಂತರ ಸ್ಥಳೀಯ ನಗರ ಪಾಲಿಕೆ ಸದಸ್ಯರಾದ (ವಾರ್ಡ್-166) ಶ್ರೀಮತಿ.ಜ್ಯೋತಿ ಶ್ರೀ ಹರಿ ರೆಡ್ಡಿರವರು ಒಂದು ಪತ್ರ ನೀಡಿ ಸದರಿ ಹೋಟೆಲ್ ಉದ್ದಿಮೆಯನ್ನು ತೆರೆಯುವಂತೆ ಒತ್ತಾಯಿಸಿರುತ್ತಾರೆ. ಅವರ ಪತ್ರದ ಒಕ್ಕಣೆಯಲ್ಲಿ ಸದರಿ ಹೋಟೆಲ್‌ರವರು ಉದ್ದಿಮೆ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿರುವುದಾಗಿ ವಾಣಿಜ್ಯ ಕಂದಾಯವನ್ನು ಮತ್ತು ಪರವಾನಗಿ ಶುಲ್ಕವನ್ನು ಪಾವತಿಸಿರುವುದಾಗಿ ದಿನಾಂಕ:12-12-2010ರಂದು ಹೋಟೆಲ್ ಪೂಜೆ ಮಾಡಿ ಸಾರ್ವಜನಿಕರಿಗೆ ಉಚಿತ ಭೋಜನ ಮತ್ತು ತಿಂಡಿ ನೀಡಿತ್ತಿರುವುದಾಗಿ, ಸದರಿ ಹೋಟೆಲ್ ಮುಚ್ಚಿರುವುದನ್ನು ತೆರವುಗೊಳಿಸಿ ಉದ್ದಿಮೆ ನಡೆಸಲು ಅನುವು ಮಾಡಿಕೊಡಬೇಕೆಂದು ಪತ್ರದಲ್ಲಿ ತಿಳಿಸಿರುತ್ತಾರೆ. ಪಕ್ಕದ ವಾರ್ಡನ (167) ನಗರ ಪಾಲಿಕೆ ಸದಸ್ಯರಾದ ಶ್ರೀ.ರಮೇಶ್‌ರವರು ಸಹ ಒಂದು ಪತ್ರ ನೀಡಿ ಸದರಿ ಹೋಟೆಲ್‌ನ್ನು ಮುಚ್ಚಿರುವುದನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. ಈ ಒತ್ತಡಗಳ ಮೇರೆಗೆ ನಾವುಗಳೂ ಮುಚ್ಚಲಾದ ಹೋಟೆಲ್‌ನ್ನು ತೆರವುಗೊಳಿಸಿ ಉದ್ದಿಮೆ ನಡೆಸಲು ಅವಕಾಶ ನೀಡಿರುತ್ತೇವೆ.

ದಿನಾಂಕ:18-12-2010ರಂದು ಉದ್ದಿಮೆ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಮತ್ತು ಪರವಾನಗಿ ಶುಲ್ಕವನ್ನು ನೀಡಿರುತ್ತಾರೆ.

ಮೇಲ್ಕಂಡ ಕಾರಣಗಳಿಂದ ಉದ್ದಿಮೆ ಪರವಾನಗಿಯನ್ನು ನೀಡಿರುವುದಿಲ್ಲ ಮತ್ತು ಕಡತವನ್ನು ಮೇಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಆದೇಶಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ ಆರೋಗ್ಯಾಧಿಕಾರಿಗಳು ಕಡತವನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ ಹೋಟೆಲ್ ಉದ್ದಿಮೆಯನ್ನು ಮಾಲೀಕರು ಅನಧಿಕೃತವಾಗಿ ನಡೆಸುತ್ತಿರುತ್ತಾರೆಂದು ತಿಳಿಸಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

**03.ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11**

ಸಂಖ್ಯೆ:27, 6ನೇ ಅಡ್ಡರಸ್ತೆ, ಸಂಪಂಗಿರಾಮನಗರ ವಾರ್ಡ್-110ರಲ್ಲಿ ಚಂದ್ರಪ್ಪ ಎಂಬುವವರು 15 ಅಶ್ವಶಕ್ತಿಗಳ ಪರವನಗಿಯನ್ನು ರದ್ದುಪಡಿಸಲು ಹಾಗೂ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ತಿಳಿಸಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ವಲಯರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಆದರಂತೆ ನನ್ನ ಮನವಿಯನ್ನು ಪರಿಗಣಿಸುವಂತೆ ಕೋರಿಕೊಂಡಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

**04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/09/2010-11**

ಸ್ವತ್ತಿನ ಸಂಖ್ಯೆ:86/3 ಮತ್ತು 86/4, ಕೋಲ್ಸ್ ರಸ್ತೆ, ವಾರ್ಡ್-78ರ ಸ್ವತ್ತಿನ ಕಂದಾಯ ನಿಗಧಿಪಡಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ರಾಜ್ ಬಹದ್ದೂರ್‌ರವರು ಕಂದಾಯ ಕಡಿಮೆ ಮಾಡಿಕೊಡುವ ಬಗ್ಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ತಮ್ಮ ಹೇಳಿಕೆಯಲ್ಲಿ ಭಾಡಿಗೆಗೆ ನೀಡಿದ್ದ ಭಾಗವು ತುಂಬಾ ದಿನಗಳಿಂದ ಖಾಲಿ ಇರುತ್ತದೆ. ಹಾಗೂ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿಲ್ಲದೇ ಇರುವುದರಿಂದ ಪರಿಶೀಲಿಸಿ ಕಂದಾಯವನ್ನು ನಿಗಧಿ ಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"



05.ವಿಷಯ:ಸಂಖ್ಯೆ:ಅಸ್ಥಾಸ/(ಆ)/11/2010-11

ಸ್ವತ್ತಿನ ಸಂಖ್ಯೆ:26, ದೂಪನಹಳ್ಳಿ, ಹೆಚ್.ಎ.ಎಲ್. 2ನೇಹಂತ ಬೆಂಗಳೂರು-08 ಇಲ್ಲಿ ರೆಫ್ರೆಸ್‌ಮೆಂಟ್ (ಸ್ಟಾರಕ್ಸ್) ನಡೆಸಲು ಉದ್ದಿಮೆ ಪರವಾನಗಿ ಕೋರಿದ್ದು, ಕೆಲವೊಂದು ಕಾರಣಗಳಿಂದ ಪರವಾನಗಿಯನ್ನು ತಿರಸ್ಕರಿಸಿ ದಿನಾಂಕ:16-12-2010ರಂದು ಆರೋಗ್ಯ ವೈದ್ಯಾಧಿಕಾರಿ (ಶಾಂತಿನಗರ) ಉಪ ವಿಭಾಗರವರು ಹಿಂಬರಹ ನೀಡಿದ್ದು, ಸದರಿ ಹಿಂಬರಹದ ವಿರುದ್ಧ ರೆಫ್ರೆಸ್‌ಮೆಂಟ್ (ಸ್ಟಾರಕ್ಸ್) ಮಾಲೀಕರಾದ ಶ್ರೀ.ಕ್ರಿಸ್‌ಲೀನ್ ಕಾರ್ಡೋಜ್‌ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಸದರಿ ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ವಿವರವಾದ ಟಿಪ್ಪಣಿಯೊಂದಿಗೆ ಸಮಿತಿಯ ಮುಂದೆ ಮಂಡಿಸುವಂತೆ ದಿನಾಂಕ:18-12-2010ರಂದು ಕೋರಲಾಗಿತ್ತು. ಆದರೆ ಇದುವರೆವಿಗೂ ಕಡತವು ಸಮಿತಿಯ ಮುಂದೆ ಬಂದಿರುವುದಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪೀಲುದಾರರು ದಿನಾಂಕ:28-01-2011ರಂದು ಮನವಿಯನ್ನು ಸಲ್ಲಿಸಿ ಈಗಾಗಲೇ ಸುಮಾರು 2 ತಿಂಗಳು ಕಳೆಯುತ್ತಾ ಬಂದರೂ ಸಹ ನಮ್ಮನ್ನು ಕರೆದು ಅಪೀಲು ನಡೆಸಿರುವುದಿಲ್ಲ ಇದರಿಂದಾಗಿ ನಮಗೆ ಆರ್ಥಿಕ ನಷ್ಟವುಂಟಾಗುತ್ತಿದ್ದು ಕೂಡಲೇ ನಮಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ನ್ಯಾಯಾಲಯದಲ್ಲಿ ಮೊಕದ್ದಮ್ಮೆ ಇರುವುದರಿಂದ ನಮಗೆ ಉದ್ದಿಮೆ ಪರವಾನಗಿ ನೀಡಲು ಬರುವುದಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಆದರೆ ಘನ ಉಚ್ಚನ್ಯಾಯಾಲಯದಲ್ಲಿ ಕಟ್ಟಡ ಉಲ್ಲಂಘನೆಗಳ ಬಗ್ಗೆ ಪ್ರಕರಣವಿದ್ದು ಸದರಿ ಪ್ರಕರಣದಲ್ಲಿ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತೇನೆ. ಹಾಗೂ ಕಟ್ಟಡ ಉಲ್ಲಂಘನೆಗೂ ಉದ್ದಿಮೆ ನಡೆಸಲು ಪರವಾನಗಿ ನೀಡುವುದಕ್ಕೂ ಸಂಬಂಧವಿರುವುದಿಲ್ಲ. ಹಾಗೂ ಪರವಾನಗಿ ಮೇಳದಲ್ಲೂ ಸಹ ಉದ್ದಿಮೆ ಪರವಾನಗಿ ನೀಡುವಂತೆ ಕೋರಿಕೊಂಡಿದ್ದರೂ ಸಹ ಪರವಾನಗೆ ನೀಡಿರುವುದಿಲ್ಲ. ಆದುದರಿಂದ ರೆಸ್ಟೋರೆಂಟ್ (ಸ್ಟಾರ್ಕ್ಸ್) ಉದ್ದಿಮೆ ನಡೆಸಲು ಪರವಾನಗೆ ನೀಡುವಂತೆ ಕೋರಿರುತ್ತಾರೆ.

ನಿರ್ಣಯ:- ಸಮಿತಿಯು ಹಿಂಬರಹದಲ್ಲಿ ತಿಳಿಸಿರುವ ಅಂಶಗಳನ್ನು ಹಾಗೂ ಅಪೀಲುದಾರರ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಸುಮಾರು 2 ತಿಂಗಳಾಗುತ್ತಾ ಬಂದರೂ ಸಮಿತಿಯ ಮುಂದೆ ಕಡತವನ್ನು ಮಂಡಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಹಾಗೂ ನ್ಯಾಯಾಲಯದಲ್ಲಿ ಕಟ್ಟಡ ಉಲ್ಲಂಘನೆಗಾಗಿ ಪ್ರಕರಣವು ದಾಖಲಾಗಿರುವುದನ್ನು ಕಡತದಲ್ಲಿರುವ ನ್ಯಾಯಾಲಯದ ಆರ್.ಎಫ್.ಎ. ಆದೇಶದ ಪ್ರತಿಯಿಂದ ದೃಢಪಡಿಸಿಕೊಳ್ಳಲಾಯಿತು. ಶ್ರೀ.ಕ್ರಿಷ್‌ಲೀನ್ ಕಾರ್ಡೋಜ್ ತಿಳಿಸಿರುವಂತೆ ಕಟ್ಟಡ ಉಲ್ಲಂಘನೆಗೂ ಉದ್ದಿಮೆ ನಡೆಸಲು ಪರವಾನಗಿ ನೀಡುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲದೇ ಇರುವುದರಿಂದ ಸದರಿಯವರು ಕೋರಿರುವಂತೆ (ಸ್ಟಾರ್ಕ್ಸ್) ರೆಫ್ರೆಸ್‌ಮೆಂಟ್ ಉದ್ದಿಮೆ ನಡೆಸಲು ಪರವಾನಗಿ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.